ವಿನಾಯಕ ಅರಳಸುರಳಿ

ಕಲೆ: ವೆಂಕಟ್ರಮಣ ಭಟ್

# ಗುಮಾಸ್ತೆ

ಕಿಕ್ಕಿರಿದು ತುಂಬಿದ್ದ ಸಿಟಿ ಬಸ್ಸು ತನ್ನೊಳಗೆ ಇಂಚಿಗೊಬ್ಬರಂತೆ ನಿಂತಿದ್ದ ಪ್ರಯಾಣಿಕರನ್ನು ಕುಲುಕಾಡಿಸುತ್ತಾ ಮೆಲ್ಲನೆ ಮುನ್ನಡೆಯುತ್ತಿತ್ತು. ರಶ್, ಸೆಖೆ, ದೂಳುಗಳಲ್ಲಿ ಬೇಯುತ್ತಾ, ರಾಡು, ಕಂಬಿ, ಚೈನುಗಳನ್ನು ಹಿಡಿದು ಅಲ್ಲಾಡುತ್ತಾ ನಿಂತಿದ್ದ, ಇನ್ನು ಸ್ವಲ್ಪ ಸಮಯದಲ್ಲಿ ಯಾವ್ಯಾವುದೋ ಆಫೀಸು, ಫ್ಯಾಕ್ಟರಿಗಳ ಒತ್ತಡದ ಕೆಲಸಗಳ ಪಾಲಾಗಲಿದ್ದ ಉದ್ಯೋಗಿಗಳು ಯಾವಾಗ ಬೇಕಾದರೂ ಸಿಡಿಯಬಹುದಾದ ಬಾಂಬುಗಳಂತೆ ಮುಖ ಸಿಂಡರಿಸಿಕೊಂಡು ನಿಂತಿದ್ದರು. ಅವರ ನಡುವೆ ಕಷ್ಟದಲ್ಲಿ ಕಾಲೂರಿ ನಿಂತಿದ್ದ ರಾಜೀವ ಬಸ್ಸು ನಿಂತು, ಚಲಿಸಲಾರಂಭಿಸಿದಾಗ ಹಿಂದಕ್ಕೂ, ಬ್ರೇಕು ಹಾಕಿದಾಗ ಮುಂದಕ್ಕೂ ವಾಲುತ್ತಾ ಅಸಮಾಧಾನದಲ್ಲಿ 'ಪ್ಚ್' ಎಂದ.

ಬರೀ ಆರೇಳು ಕಿಲೋಮೀಟರ್ ದೂರದ ಆಫೀಸು. ಬಿರುಸಾಗಿ ತುಳಿದರೆ ಮೂವತ್ತು ನಿಮಿಷಕ್ಕೆ ಸೈಕಲ್‌ನಲ್ಲೇ ತಲುಪಿಬಿಡಬಹುದು. ಆದರೆ ಬಸ್ಸೆಂಬ ಈ ಶರವೇಗದ ವಾಹನಕ್ಕೂ ಒಂದೂವರೆ ಗಂಟೆ ತಗುಲುತ್ತದೆ. ಇದು ಈ ಬೆಂಗಳೂರು ಟ್ರಾಫಿಕ್‌ನ ವಿಶ್ವರೂಪ. ಇವತ್ತೇನೋ ಹತ್ತೂ ಮೂವತ್ತರ ಬಸ್ಸಿನಲ್ಲಿದ್ದಾನೆ. ಆದರೆ ಪ್ರತಿದಿನ ಬೆಳಗ್ಗೆ ಆರೂ ಮೂವತ್ತಕ್ಕೆ ಹೊಡೆದುಕೊಳ್ಳುವ ಅಲಾರಾಂನ ಕೆನ್ನೆಗೆ ಬಾರಿಸಿ, ಆ ಎಂದು ಆಕಳಿಸಿ ಏಳುವಷ್ಟರಲ್ಲೇ ಗಡಿಯಾರ ಏಳರ ಮನೆಯ ಸಮೀಪ ಬಂದಿರುತ್ತದೆ. ಥಂಗನೆ ಹಾಸಿಗೆ ಬಿಟ್ಟೆದ್ದು, ಗಸಗಸನೆ ಹಲ್ಲುಜ್ಜಿ, ಬಾಕ್ಸಿನಲ್ಲಿರುವ ಇಡೀ ಸೋಪನ್ನು ಕೈಗೆತ್ತಿಕೊಂಡು ಸಂದಿಗೊಂದಿಗೆಲ್ಲಾ ಉಜ್ಜಿ, ಧೊಪಧೊಪನೆ ನೀರು ಹೊಯ್ದುಕೊಂಡು ಭರತನಾಟ್ಯ ಮಾಡುವವನಂತೆ ಸ್ನಾನ ಮುಗಿಸಿ ಏಳೂ ಹತ್ತಕ್ಕೆ ರೂಮು ಬಿಡುವುದು ರಾಜೀವನ ನಿತ್ಯದ ಅಭ್ಯಾಸ. ಸೀಟು ಸಿಗುವುದೆಂಬ ಆಸೆಯಲ್ಲಿ ರೂಮಿನ ಬಳಿಯೇ ಇರುವ ಜೇಡಿಮರು ನಿಲ್ದಾಣದ ಬದಲು ಮುಕ್ಕಾಲು ಕಿಲೋಮೀಟರ್ ನಡೆದುಹೋಗಿ ಜನತಾ ಬಜಾರ್ ನಿಲ್ದಾಣದಲ್ಲಿ ಬಸ್ಸು ಹತ್ತುತ್ತಾನೆ. ಗುರುಬಲ ಗಟ್ಟಿಯಿದ್ದ ಪಕ್ಷದಲ್ಲಿ ಯಾವುದೋ ಒಂದು ಬಸ್ಸು ಒಂದೆರಡು ಖಾಲಿ ಸೀಟುಗಳೊಂದಿಗೆ ಆಗಮಿಸುತ್ತದೆ. ಇಲ್ಲವಾದರೆ ಮುಂದಿನ ಒಂದೂವರೆ ಗಂಟೆ ದೊಂಬರಾಟದವನಂತೆ ಬಸ್ಸೊಳಗಿನ ಮೇಲ್ಕಂಬಿಗೆ ನೇತಾಡಿಕೊಂಡೇ ಆಫೀಸು ತಲುಪಬೇಕಾಗುತ್ತದೆ. "ಅಲ್ರೀ, ಸುಮ್ನೆ ಯಾಕೆ ಅಷ್ಟು ದೂರದಿಂದ ಓಡಾಡ್ತೀರಾ? ಇಲ್ಲೇ ಕೋರಮಂಗಲದಲ್ಲೇ ರೂಮು